ಪ್ರಬಂಧ

# ಪವಡಿಸಿದ ಕಂಬ ಹೊರಳಿದ್ದೇ ಪವಾಡ!



**ನಾಗೇಶ ಹೆಗಡೆ**

ಬೆಂಗಳೂರಿನ ದಟ್ಟ ಟ್ರಾಫಿಕ್ ಮಧ್ಯೆ ಮೂತಿ ಚಾಚಿ ಈ ಭಾರೀ ಪೈಪು ಮೊಸಳೆಯ ಹಾಗೆ ಮಲಗಿತ್ತು. ಮಲ್ಲೇಶ್ವರದ ಮಂತ್ರಿಮಾಲ್ ಮೆಟ್ರೊ ನಿಲ್ದಾಣದ ದ್ವಾರದ ಬಳಿ ಸಖತ್ ರಶ್ ಇರುವ ತಾಣದಲ್ಲೇ ಇದು ಮಲಗಿತ್ತು. ಅರೆಗತ್ತಲಲ್ಲಿ ಸರ್ರೆಂದು ಸಾಗಿ ಬರುವ ಯಾವುದಾದರೂ ಗಾಡಿ ಇದಕ್ಕೆ ಡಿಕ್ಕಿ ಹೊಡೆದರೆ ಏನಪ್ಪಾ ಗತಿ? ಮನುಷ್ಯರು ಮೂತಿ ಜಪ್ಪಿಸಿಕೊಂಡರೆ ಹೇಗಪ್ಪಾ?

ಐರನಿ ಏನು ಗೊತ್ತಾ? ಕತ್ತಲ ರಸ್ತೆಯಲ್ಲಿ ಹೊನಲು ಬೆಳಕು ಬೀರಲೆಂದೇ 50 ಅಡಿ ಉದ್ದದ ಈ 'ಹೈ ಮಾಸ್ಟ್' ದೀಪದ ಕಂಬ ಎದ್ದು ನಿಲ್ಲಬೇಕಿತ್ತು. ಆದರೆ, ಇಲ್ಲಿ ಅದನ್ನು ಎರ್ರಾಬಿರ್ರಿ ಮಲಗಿಸಿ ಹೋಗಿದ್ದರು ಯಾರೋ.

ಅದು ಇಲ್ಲಿ ಮಲಗಿ ಅದೆಷ್ಟು ವಾರವಾಗಿತ್ತೊ ತಿಂಗಳಾಗಿತ್ತೊ, ಕತ್ತಲಲ್ಲಿ ಅದೆಷ್ಟು ಜನ ಇದಕ್ಕೆ ಡಿಕ್ಕಿ ಹೊಡೆದು ಹೋಗಿದ್ದರೊ? ಅದೆಷ್ಟು ವಾಹನಗಳು ಹಿಡಿಶಾಪ ಹಾಕಿ ಹೋಗಿದ್ದವೋ? ಕೊಳವೆಯಂಥ ಈ ಕಂಬ ಮಾತ್ರ ತಣ್ಣಗೆ ಬಾಯ್ತೆರೆದು ಮಲಗಿಯೇ ಇತ್ತು. 'ತಿಂಗಳಿಂದ ಇದೆ ಸಾರ್, ಬೇವಾರ್ಸಿಗಳು ಇಲ್ಲೇ ಬಿಟ್ ಹೋಗಿದ್ದಾರೆ' ಎಂದ ಒಬ್ಬ ಆಟೊ ಚಾಲಕ. 'ನಾವೇ ಎತ್ತಾಕ್ಕಂಡ್ ಹೋಗೋಣ ಅಂದ್ರೆ ಸ್ಯಾನೆ ದೊಡ್ಡದು!' ಎಂದ ಇನ್ನೊಬ್ಬ.

ರಸ್ತೆಗೆ ಮೂತಿ ಒತ್ತಿ ಬಾಯ್ತೆರೆದು ಮಲಗಿದ ಇದರ ಮುಖಕ್ಕೆ 'ಅಪಾಯದ ಸಂಕೇತವಾಗಿ ಒಂದು ಕೆಂಪು ಚಿಂದಿ ಬಟ್ಟೆಯನ್ನಾದರೂ ಸಿಕ್ಕಿಸೋಣವೆಂದು ಅತ್ತಿತ್ತ ಹುಡುಕಿದೆ. ಸಿಗಲಿಲ್ಲ. ಇದನ್ನು ತುಸು ದೂರ ಹೊರಳಿಸಿ ದಾರಿಯನ್ನು ಸುರಕ್ಷಿತ ಮಾಡಲು ಸಾಧ್ಯವೇ ಎಂದು ದೂರದಲ್ಲಿದ್ದ ಟ್ರಾಫಿಕ್ ಪೇದೆಯನ್ನು ಕೇಳಿದೆ. ಉತ್ತರಿಸಲೂ ಬಿಡುವಿಲ್ಲದಂತೆ ಆತ ಬಾಯ್ತುಂಬಾ ಶೀಟಿಯನ್ನು ತುಂಬಿಕೊಂಡು ಊದುತ್ತಿದ್ದ. ಕೊನೆಗೂ ಬಾಯ್ತೆರೆದು, 'ಅದು ನಮ್ಮದಲ್ಲ ಸಾರ್, ತುಂಬಾ ಡೇಂಜರಸ್ ಅದು. ಕೆಇಬಿಯನ್ನು ಕೇಳಿ' ಎಂದ.

ಯಾರನ್ನು ಕೇಳೋದು? ಕೆ.ಇ.ಬಿ ಅಂದರೆ, 'ಕೇಳೋರೇ ಇಲ್ಲ ಬಿಡಿ' ಎಂಬ ಹಳೇ ಫುಲ್ ಫಾರ್ಮ್ ನೆನಪಾಯಿತು. ಈಗ ಅದು ಕೆಪಿಟಿಸಿ-ಎಲ್ ಆಗಿದೆ. ಎಲ್ ಆಗಿದೆಯೊ, ಏನ್ ಕಥೆಯೋ?. ಬೆಂಗಳೂರಿಗಂತೂ 'ಬೆಸ್ಕಾಮ್' ಆಗಿದೆ -ಅಂತೂ ಹೊಸ ಹೆಸರು ಬಂದರೂ ಹಳೇ ಚಾಳಿ ಬಿಟ್ಟಂತಿಲ್ಲ.